ಇದೆ, ಕೇಕ್ ಇದೆ' ಎಂದು ಡೇನಿಶ್ ವ್ಯಂಜನಗಳ ಹೆಸರುಗಳನ್ನು ಹೇಳಿದಳು.

ನನ್ನ ಬಾಯಿಯಿಂದ ಜೊಲ್ಲು ಸುರಿಯಿತು, ಆದರೂ ಹೇಳಿದೆ, 'ಬೇಡ ಬೇಡ. ನಾನು ನಿಮ್ಮ ಭೋಜನವನ್ನು ಸ್ವೀಕರಿಸಲಾರೆ.'

'ನೋಡಿ, ತುಂಬಾ ಊಟವಿದೆ. ನಾನು ಮತ್ತು ನನ್ನ ಮಗ ಇಷ್ಟೊಂದು ತಿನ್ನಲಾರೆವು. ಅಲ್ಲದೆ ನನ್ನ ಮಗ ಚೈನೀಸ್ ಫುಡ್ ತಿನ್ನಲು ಇಷ್ಟಪಡ್ತಾನೆ.'

ನಾನು ಧರ್ಮಸಂಕಟಕ್ಕೀಡಾದೆ; ಆಗಲೇ ಅವಳು ಒಂದು ಲೈಟ್ ಕಂಬದೆಡೆಗೆ ಸಂಜ್ಞೆ ಮಾಡುತ್ತಾ ಹೇಳಿದಳು, 'ಬನ್ನಿ, ಅಲ್ಲಿ ಕೂರೋಣ'.

ರಾತ್ರಿಯ ನೀರವದಲ್ಲಿ ಮುಕ್ತ ಆಕಾಶದ ಕೆಳಗೆ ನಾವಿಬ್ಬರು ಮಂಜಿನಿಂದಾವೃತವಾದ ನೆಲದ ಮೇಲೆ ಕೂತೆವು. ಅವಳು ತನ್ನ ಬ್ಯಾಗಿನಿಂದ ಒಂದೊಂದೇ ವ್ಯಂಜನಗಳನ್ನು ಹೊರ ತೆಗೆದು ನೆಲದ ಮೇಲಿಡಲಾರಂಭಿಸಿದಳು. ಎಲ್ಲವೂ ಮನೆಯಲ್ಲಿ ತಯಾರಿಸಿದ ಸ್ವಾದಿಷ್ಟ ಭೋಜನಗಳಾಗಿದ್ದವು. ಅವಳು ನನಗೆ ಆಗ್ರಹದಿಂದ ಉಣಬಡಿಸುತ್ತಿದ್ದಳು, ನಾನು ತಿನ್ನುತ್ತಲೇ ಹೋದೆ. ನಾನು ಅವಳಿಗೆ ಸಹಾಯ ಮಾಡಲು ಬಯಸುತ್ತಿದ್ದೆ, ಅದರೆ ಅವಳೇ ನನಗೆ ಸಹಾಯ ಮಾಡುತ್ತಿದ್ದಾಳೆ.

'ನನ್ನ ತಾಯಿಯನ್ನು ಬಿಟ್ಟರೆ, ನೀವೇ ನನಗೆ ಇಷ್ಟು ಪ್ರೀತಿಯಿಂದ ಉಣಬಡಿಸುತ್ತಿದ್ದೀರಿ' ಎಂದೆ.

'ಪೂರ್ವದ ನಾವು, ತೀರ್ಥಯಾತ್ರೆ ಮಾಡುವವರಿಗೆ ಸಹಾಯ ಮಾಡಿದರೆ ನಮಗೂ ಸ್ವಲ್ಪ ಪುಣ್ಯ ಲಭಿಸುತ್ತದೆ ಎಂದು ಭಾವಿಸುತ್ತೇವೆ.' ಅವಳು ತುಂಟ ನಗೆ ಸೂಸಿದಳು.

'ನಿಮ್ಮ ಹೆಸರೇನು?' ನಾನು ಸಹ ನಕ್ಕೆ.

'ಚಾವ್ ಕ್ಸಿಂಗ್.'

'ಚಾವ್ ಕ್ಸಿಂಗ್!'

'ಹೌದು, ಇದರ ಅರ್ಥ ಮಾರ್ನಿಂಗ್ ಸ್ಟಾರ್.'

'ನಾನೀಗ ಓರ್ವ 'ಮಾರ್ನಿಂಗ್ ಸ್ಟಾರ್' ಜೊತೆಯಲ್ಲಿ ಕೂತಿದ್ದೇನೆ. ಅದಕ್ಕೇ ಈ ಬೆಳಕು ಅಕಸ್ಮಾತ್ ಎಲ್ಲಿಂದ ಬಂತೆಂದು ಯೋಚಿಸುತ್ತಿದ್ದೇನೆ', ನಾನು ತಮಾಷೆ ಮಾಡಿದೆ.

'ನೀವು ವಿನೋದಪ್ರಿಯರು. ನಿಮ್ಮ ಹೆಸರೇನು?'

'ಪಾಲ್'

'ಪಾಲ್, ಸುಲಭದ ಹೆಸರಾಗಿದೆ'

'ಇದು ಒಂದು ಸಾಮಾನ್ಯ ಹೆಸರು; ಫ್ರೆಂಚ್, ಜರ್ಮನ್, ಬ್ರಿಟಿಷ್, ಡೇನಿಶ್, ಸ್ವೀಡಿಶ್ ಎಲ್ಲಾ ದೇಶಗಳಲ್ಲಿನ ಪುರುಷರಿಗೆ ಸಾಮಾನ್ಯವಾಗಿ ಇದೇ ಹೆಸರನ್ನಿಡಲಾಗುತ್ತದೆ' ಎಂದೆ.

'ಇದರರ್ಥವೇನು?'

'ಲ್ಯಾಟಿನ್‌ನಲ್ಲಿ ಇದಕ್ಕೆ 'ವಿನಮ್ರ' ಎಂಬ ಅರ್ಥವಿದೆ. ಇದು ಒಬ್ಬ ಸಂತನ ಹೆಸರೆಂಬುದು ನಿಮಗೆ ಬಹುಶಃ ತಿಳಿದಿರಬೇಕು.'

ತನಗೆ ಗೊತ್ತಿಲ್ಲವೆಂಬಂತೆ ತಲೆಯಾಡಿಸಿದಳು.

'ಸಂತ ಪಾಲರು ಆರಂಭದ ಕ್ರಿಶ್ಚಿಯನ್ ಚರ್ಚ್‌ನಲ್ಲಿ ಓರ್ವ ಮಹತ್ವದ ನೇತಾರರಾಗಿದ್ದರು.'

'ಇಂದು ಈ ನಡುರಾತ್ರಿಯಲ್ಲಿ ನನಗೆ ಸಂತ ಪಾಲರ ದರ್ಶನವಾಯಿತು', ಅವಳು ಮಗುವಿನಂತೆ ಮತ್ತೆ ಮುಗುಳ್ನಕ್ಕಳು.

'ನೀವು ನನ್ನನ್ನು ಶಿಖರಕ್ಕೇರಿಸುತ್ತಿದ್ದೀರಿ?' ಎಂದು ಕಾಲುಗಳನ್ನು ಚಾಚಿದೆ.

ಅಕಸ್ಮಾತ್ ಅವಳ ದೃಷ್ಟಿ ನನ್ನ ಕಾಲಿನ ಮೇಲೆ ಬಿತ್ತು, 'ನಿಮ್ಮ ಚಪ್ಪಲಿಗೆ ಏನಾಯ್ತು?'

'ಮುರಿದುಹೋಯ್ತು. ಬಳ್ಳಿ ಮತ್ತು ಕರ್ಚೀಫ್‌ನಿಂದ ಕಟ್ಟಿದ್ದೇನೆ.'

ಅವಳು ನನ್ನೆಡೆಗೆ ಕೈಚಾಚಿ ಹೇಳಿದಳು, 'ಚಪ್ಪಲಿ ಕೊಡಿ, ಹೊಲಿದು ಕೊಡ್ತೀನಿ.'

'ನೀವು ನನ್ನ ಚಪ್ಪಲಿ ಹೊಲಿಯುವಿರಾ?' ನನಗೆ ಆಶ್ಚರ್ಯವಾಯಿತು.

'ಹೌದು, ನಾನು ಹೊಲಿಗೆ ಕೆಲಸವನ್ನು ಸಹ ಮಾಡ್ತೀನಿ' ಎಂದು ಅವಳು ತನ್ನ ಬ್ಯಾಗ್ ತೆರೆದಳು. ಅವಳ ಬ್ಯಾಗನ್ನು ಗಮನವಿಟ್ಟು ನೋಡಿದೆ; ಬ್ಯಾಗ್ ಮೇಲೆ ಚೈನೀಸ್ ಕಸೂತಿಗಳಿದ್ದವು.

ನಾನು ಬ್ಯಾಗನ್ನು ದಿಟ್ಟಿಸಿ ನೋಡುತ್ತಿರುವುದನ್ನು ನೋಡಿ ಹೇಳಿದಳು, 'ಈ ಬ್ಯಾಗಿಗೆ ನಾನೇ ಕಸೂತಿ ಮಾಡಿದ್ದೇನೆ.'

'ತುಂಬಾ ಚೆನ್ನಾಗಿದೆ!'

ಅವಳು ಬ್ಯಾಗಿನಿಂದ ಒಂದು ಡಿಸೈನ್ ಹೊರ ತೆಗೆಯುತ್ತಾ ಹೇಳಿದಳು, 'ಈಗ ಇದನ್ನು ಮಾಡುತ್ತಿದ್ದೇನೆ. ಬಿಡುವು ಸಿಕ್ಕಾಗ, ಕಸೂತಿ ಹಾಕ್ತೀನಿ. ನನ್ನ ಮಗನಿಗೆ ಮಫ್ಲರ್ ತಯಾರಿಸುತ್ತಿದ್ದೇನೆ.'

ನಾನು ನನ್ನ ಚಪ್ಪಲಿಯನ್ನು ಅವಳೆಡೆಗೆ ಚಾಚಿದೆ. ಅವಳು ಒಂದು ದಪ್ಪ ಸೂಜಿ ಮತ್ತು ಉಣ್ಣೆಯ ದಾರದಿಂದ ನನ್ನ ಚಪ್ಪಲಿಯನ್ನು ಹೊಲಿದು ಕೊಟ್ಟಳು.

'ನಿಮಗೆ ಯಾವ ಯಾವುದಕ್ಕೆ ಧನ್ಯವಾದವನ್ನು ಹೇಳಲಿ? ನಿಮ್ಮ ಬಳಿ ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ.'

ಎರಡು ಗಳಿಗೆಯ ಒಡನಾಟ... ಅವಳು ನನಗೆ, ನಾವಿಬ್ಬರು ಯುಗ ಯುಗಗಳಿಂದ ಪರಿಚಿತರು ಎಂದು ಮನದಟ್ಟು ಮಾಡಿ ಹೊರಟು ಹೋದಳು. ಕೋಪನ್‌ಹೇಗನ್‌ಗೆ ಮರಳಿ ಹೋಗಿ ಅವಳಿಗೊಂದು ಧನ್ಯವಾದದ ಪತ್ರವನ್ನು ಹಾಕಲು ಅವಳ ಫೋನ್ ನಂಬರ್ ಮತ್ತು ಮನೆಯ ವಿಳಾಸವನ್ನು ನನ್ನ ಡೈರಿಯಲ್ಲಿ ಬರೆದುಕೊಂಡೆ.

ಅವಳು ನನ್ನೊಂದಿಗೆ ಮತ್ತೆ ಎರಡು ಹೆಜ್ಜೆ ಹಾಕಿದಳು. ನಂತರ ಬಲಗಡೆಗೆ ಹೋಗುವ ರಸ್ತೆಯನ್ನು ತೋರಿಸುತ್ತಾ ಹೇಳಿದಳು, 'ನಾನು ಈ ಕಡೆ ಹೋಗಬೇಕಿದೆ...'

ನಾವಿಬ್ಬರು ಪರಸ್ಪರ ಕೈಕುಲುಕಿದೆವು, ಪರಸ್ಪರ ಶುಭ ಹಾರೈಸಿಕೊಂಡೆವು. ಅವಳು ತನ್ನ ಮನೆಗೆ ಹೋಗುವ ರಸ್ತೆಗೆ ಹೊರಳಿದಳು.

ಅವಳು ಕಗ್ಗತ್ತಲಿನ ಕ್ಷಿತಿಜದಲ್ಲಿ ಮಿಂಚಿನಂತೆ ಮಿಂಚಿ, ನನಗೆ ಬೆಳಕು ತೋರಿಸಿ ಇದ್ದಕ್ಕಿದ್ದಂತೆ ಮಾಯವಾದಳು. ಈ ಜಗತ್ತಿನಲ್ಲಿ ನಾವು ಅರಿತುಕೊಳ್ಳದ, ಎಂದೂ ಭೇಟಿಯಾಗದ ಒಳಿತು–ಕೆಡುಕಿನ ಅನೇಕ ಜನರಿದ್ದಾರೆ. ಆದರೆ ಅವರು ಈ ಜಗತ್ತಿನಲ್ಲಿದ್ದರು, ಇದ್ದಾರೆ, ಸದಾ ಇರುತ್ತಾರೆ. ಮತ್ತೊಮ್ಮೆ ನಮ್ಮ ಭೇಟಿಯಾಗಲಾರದು ಎಂಬುದು ಸಹ ನನಗೆ ಗೊತ್ತಿದೆ, ಆದರೆ ಆತ್ಮೀಯತೆಯ ಈ ಸ್ಪಂದನವನ್ನು ನಾನೆಂದೂ ಮರೆಯಲಾರೆ. ನನಗೆ ಚಾವ್ ಕ್ಸಿಂಗ್‌ಳ ಮಾನವೀಯತೆ ಸದಾ ನೆನಪಿನಲ್ಲಿರುವುದು.

### ಆತ್ಮಹತ್ಯೆ - ಒಂದು ಅಸಂಬದ್ಧ ಸಾವು

ನನಗೆ ಫೇಸ್‌ಬುಕ್‌ನಿಂದ ವಿಷಯ ತಿಳಿದಿತ್ತು. ನನ್ನ ಸೆಕೆಂಡ್ ಪಿರಿಯಡ್ ಫ್ರೀ ಇತ್ತು. ನಾನು ಕಂಪ್ಯೂಟರ್ ರೂಮಿನಲ್ಲಿ ಕೂತು ನನ್ನ ಇಮೇಲ್ ಚೆಕ್ ಮಾಡಲಾರಂಭಿಸಿದೆ, ಕಡೆಗೆ ಹೀಗೇ ಫೇಸ್‌ಬುಕ್‌ಗೆ ಹೋದೆ. ಜನ ನೀನಾಳ ವಾಲ್‌ಗೆ ಮೆಸೇಜ್ ಕಳುಹಿಸುತ್ತಿದ್ದರು

'ವಿ ಆರ್ ಸಾರಿ ಫಾರ್ ಯುವರ್ ಲಾಸ್. ಡೀಪ್ ಕಂಡೊಲೆನ್ಸ್.'

'ಅನ್‌ಬಿಲಿವೆಬಲ್! ನಂಬಲಾಗುತ್ತಿಲ್ಲ'.

'ನಮಗೆ ತುಂಬಾ ದುಃಖವಾಗಿದೆ'.

ನನಗೆ ಗಾಬರಿಯಾಯಿತು. ನೀನಾ ಈ ಲೋಕವನ್ನೇ ತ್ಯಜಿಸಿದಳೇ ಎಂದು ಮೊದಲು ಯೋಚಿಸಿದೆ. ಆದರೆ ಕೆಲವು ಸುದ್ದಿಗಳಿಂದ, ನೀನಾಳ ಬಾಯ್‌ಫ್ರೆಂಡ್ ಸತ್ತ ಸುದ್ದಿ ತಿಳಿಯಿತು. ನಾನು ಪೀಟರ್‌ನ ಫೇಸ್‌ಬುಕ್ ಫ್ರೆಂಡ್ ಆಗಿರಲಿಲ್ಲ, ಆದರೂ ಅವನ ಫೇಸ್‌ಬುಕ್‌ಗೆ ಹೋದೆ. ಅಲ್ಲೂ ಮೆಸೇಜ್‌ಗಳಿದ್ದವು

'ಪೀಟರ್, ಗಾಡ್ ಓನ್ಲಿ ನೋ ವೈ ಯೂ ಡಿಡ್ ದಟ್.' (ನೀನೇಕೆ ಹೀಗೆ ಮಾಡಿದೆಯೆಂದು ದೇವರಿಗೇ ಗೊತ್ತು.)

'ವಾಟ್ ಮೇಡ್ ಯೂ ಡೂ ದಟ್? ಯೂ ಶುಡ್ ಹ್ಯಾವ್ ಬೀನ್ ಕರೇಜಿಯಸ್...' (ನೀನು ಹೀಗೆ ಮಾಡಿಕೊಳ್ಳಲು ಕಾರಣವೇನು? ನೀನು ಧೈರ್ಯವಾಗಿರಬೇಕಿತ್ತು.)

'ಗುಡ್‌ಬೈ ಹೇಳುವುದು ಕಷ್ಟವಾಗುತ್ತದೆ, ಆದರೆ ಅದೆಷ್ಟೋ ಬಾರಿ ಹೀಗೆ ಹೇಳದೆ ಬೇರೆ ಮಾರ್ಗವಿಲ್ಲ. ಪೀಟರ್ ರೆಸ್ಟ್ ಇನ್ ಪೀಸ್...'

ನನಗೆ ಭಯವಾಯಿತು. ಅನುಮಾನವೂ ಆಯಿತು. ಇದು ಆತ್ಮಹತ್ಯೆ ಎಂದು ಅನ್ನಿಸುತ್ತದೆ. ಮೊದಲು ನಾನು ಮೌನವಾಗಿ ಕೂತು ಯೋಚಿಸುತ್ತಿದ್ದೆ. ಪೀಟರ್ ಆತ್ಮಹತ್ಯೆ ಮಾಡಿಕೊಳ್ಳಲಾರ. ಅವನೇಕೆ ತನ್ನ ಜೀವ ತೆಗೆದುಕೊಳ್ಳುತ್ತಾನೆ? ಅವನಿಗೇನು ಕೊರತೆಯಿತ್ತು? ಸುದ್ದಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ನನ್ನಿಂದ ತಪ್ಪಾಯಿತು. ನಾನು ಮತ್ತೊಮ್ಮೆ ಪೀಟರ್ ಮತ್ತು ನೀನಾಳ ಫೇಸ್‌ಬುಕ್‌ನಲ್ಲಿದ್ದ ಮೆಸೇಜ್‌ಗಳನ್ನು ಓದಿದೆ. ಎಂದ್ರಿಯಾಜನಿಂದಲೂ ಓದಿಸಿದೆ.

ಎಂದ್ರಿಯಾಜ್ ಹೇಳಿದ, 'ಈ ಸುದ್ದಿಗಳಿಂದ, ನೀನಾಳ ಬಾಯ್‌ಫ್ರೆಂಡ್ ಆತ್ಮಹತ್ಯೆ ಮಾಡಿಕೊಂಡನೆಂದು ಅನ್ನಿಸುತ್ತದೆ.'

ನನಗೆ ಆಶ್ಚರ್ಯವಾಯಿತು. ನೀನಾಳ ಜೀವನದಲ್ಲಿ ಇದೇನಾಗುತ್ತಿದೆ! ನನ್ನಿಂದ ತಡೆದುಕೊಳ್ಳಲಾಗಲಿಲ್ಲ. ಕೂಡಲೇ ನೀನಾಳಿಗೆ ಫೋನ್ ಮಾಡಿದೆ. ಬಹುಶಃ ಅವಳು ನನ್ನ ಫೋನನ್ನು ಎತ್ತುವ ಸ್ಥಿತಿಯಲ್ಲಿ ಇಲ್ಲ ಎಂದೂ ಯೋಚಿಸಿದೆ. ಆದರೆ ಅವಳು ಮೂರನೆಯ ರಿಂಗ್‌ನಲ್ಲಿ ಫೋನ್ ಎತ್ತಿದಳು. ಅವಳು ಬಿಕ್ಕಳಿಸಿದ ಶಬ್ದಗಳು ನನ್ನ ಕಿವಿಗಳಿಗೆ ಬಿದ್ದವು.

'ನೀನಾ, ಫೇಸ್‌ಬುಕ್‌ನಲ್ಲಿ ನಾನು ಓದುತ್ತಿರುವುದು...?'